**ಸೆಪ್ಟೆಂಬರ್ 23 , 2016**

**ಯಾವುದೇ ಒಳಾಕ್ಷರ ಇಲ್ಲದಿರುವ , ಸಂಖ್ಯಾಂಕಣಗಳಲ್ಲಿ ಸಂಖ್ಯೆಗಳ ಗಾತ್ರ ಆರೋಹಣ ಮಾದರಿಯಲ್ಲಿರುವ, ಉಬ್ಬು ಮುದ್ರಣ ಇಲ್ಲದಿರುವ ₹ 50 ಮೌಲ್ಯ ವರ್ಗದ ಬ್ಯಾಂಕ್ ನೋಟುಗಳ ನೀಡಿಕೆ .**

ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್ ಡಾ.ರಘುರಾಮ್ ಜಿ ರಾಜನ್ ಅವರ ಸಹಿಯುಳ್ಳ, ಬ್ಯಾಂಕು ನೋಟಿನ ಹಿಂದೆ ಮುದ್ರಣ ವರ್ಷ 2016 ಮುದ್ರಿಸಿರುವ ಮತ್ತು ಎರಡೂ ಬದಿಯ ಸಂಖ್ಯಾಕಣಗಳಲ್ಲಿ ಯಾವುದೇ ಒಳಾಕ್ಷರ ಇಲ್ಲದಿರುವ ಮಹಾತ್ಮಾ ಗಾಂಧಿ ಶ್ರೇಣಿ -2005 ರ, ₹ 50 ರ ಬ್ಯಾಂಕು ನೋಟುಗಳನ್ನು ಶೀಘ್ರದಲ್ಲಿಯೇ ಭಾರತೀಯ ರಿಸರ್ವ್ ಬ್ಯಾಂಕ್ ಬಿಡುಗಡೆ ಮಾಡಲಿದೆ.

ಈಗ ನೀಡಲಿರುವ ನೋಟುಗಳ ವಿನ್ಯಾಸವು ಕೆಳಕಂಡ ವೈಶಿಷ್ಟ್ಯಗಳನ್ನು ಹೊರತುಪಡಿಸಿ ಈ ಹಿಂದೆ ನೀಡಲಾದ ನೋಟಿನ ಎರಡು ಬದಿಯ ಸಂಖ್ಯಾಂಕಣಗಳಲ್ಲಿ ಸಂಖ್ಯೆಗಳ ಗಾತ್ರ ಆರೋಹಣ ಮಾದರಿಯಲ್ಲಿರುವ ಮಹಾತ್ಮಾ ಗಾಂಧಿ ಶ್ರೇಣಿ **-2005** ರ **₹ 50** ಬ್ಯಾಂಕು ನೋಟುಗಳಂತಯೇ ಇರುತ್ತವೆ.

## ಮುಂಭಾಗ

## ಉಬ್ಬು ಮುದ್ರಣ

ಸಂಖ್ಯೆ " 50" , ರಿಸರ್ವ್ ಬ್ಯಾಂಕ್ ಮುದ್ರೆ , ಮಹಾತ್ಮ ಗಾಂಧಿಯವರ ಭಾವಚಿತ್ರ , ರಿಸರ್ವ್ ಬ್ಯಾಂಕ್ , ರಿಸರ್ವ್ ಬ್ಯಾಂಕಿನ್ ಲೇಜೆಂಡ್ (ಸತ್ಯ ಮೇವ ಜಯತೆ ) , ಖಾತರಿ ಮತ್ತು ವಚನ ವಾಖ್ಯಾಂಶ , ಗವರ್ನರ್ ಸಹಿ , ಇಲ್ಲಿಯವರಗೆ ಉಬ್ಬು ಮುದ್ರಣದಲ್ಲಿ ಮುದ್ರಿತವಾಗಿದ್ದ ಅಶೋಕ ಸ್ಥಂಭ ಲಾಂಛನ ಈಗ ಆಫ್ಸೆಟ್ ನಲ್ಲಿ (offset) ಮುದ್ರಿತ ಮಾಡಲಾಗುತ್ತಿದೆ. ಇದಲ್ಲದೆ, ಬ್ಯಾಂಕ್ ನೋಟಿನ ಎಡಭಾಗದಲ್ಲಿರುವ ಚೌಕಾಕಾರದ ಗುರುತು ಚಿಹ್ನೆಯನ್ನು ತೆಗೆಯಲಾಗಿದೆ.

## ವರ್ಣ

ನೋಟಿನ ಹಿಂಭಾಗದ ವರ್ಣದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಆದರೆ ಮುಂಭಾಗದ ವರ್ಣವು ತಿಳಿದಾಗಿರುತ್ತದೆ (ಉಬ್ಬು ಮುದ್ರಣವನ್ನು ತೆಗೆದಿರುವ ಕಾರಣ)

## ಗುಪ್ತ ಚಿತ್ರ

ಇಲ್ಲಿಯವರೆಗೆ ಸಂಖ್ಯೆ "50" ರ ಗುಪ್ತ ಚಿತ್ರವನ್ನು ಮಹಾತ್ಮ ಗಾಂಧಿಯವರ ಭಾವಚಿತ್ರದ ಬಲಭಾಗದಲ್ಲಿರುವ ಲಂಬಪಟ್ಟಿಯು ಹೊಂದಿತ್ತು. ಕಣ್ಣಿನ ನೇರಕ್ಕೆ ಹಿಡಿದಾಗ ಮಾತ್ರ ಗುಪ್ತ ಚಿತ್ರ ಗೋಚರವಾಗುತಿತ್ತು. ಈ ವೈಶಿಷ್ಟ್ಯವು ಇನ್ನು ಮುಂದೆ ಇರುವುದಿಲ್ಲ .

**ಹಿಂಭಾಗ**

ಬ್ಯಾಂಕ್ ನೋಟಿನ ಹಿಂಭಾಗದಲ್ಲಿ ಯಾವುದೇ ರೀತಿಯ ಬದಲಾವಣೆ ಇರುವುದಿಲ್ಲ.

ಬ್ಯಾಂಕ್ ನೋಟಿನ ಮಾದರಿ ಚಿತ್ರ ಈ ಕೆಳಗಿನಂತೆ ಇರುತ್ತದೆ.







ಈ ಹಿಂದೆ ಭಾರತೀಯ ರಿಸರ್ವ್ ಬ್ಯಾಂಕಿನಿಂದ ನೀಡಲಾದ ₹ 50 ರ ಮೌಲ್ಯವರ್ಗದ ಎಲ್ಲಾ ನೋಟುಗಳೂ ವಿಧಿಮಾನ್ಯ ಚಲಾವಣೆಯಲ್ಲಿ ಮುಂದುವರಿಯುತ್ತವೆ.

**ಅಜಿತ್ ಪ್ರಸಾದ್**

**ಪತ್ರಿಕಾ ಪ್ರಕಟಣೆ : 2016-2017/751** **ಸಹಾಯಕ ಸಲಹೆಗಾರರು**